# JANUARY 12, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ರೈತರ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ; ರಾಜ್ಯ ಕೃಷಿ ಬೆಲೆ ಆಯೋಗದಿಂದ, ಯೋಜನೆ.
- ಕೃಷಿಯನ್ನು ಲಾಭದಾಯಕವಾಗಿಸಲು, ಕೃಷಿ ಮೇಳಗಳು ರೈತರಿಗೆ ಸಹಕಾರಿ.
- ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ, ಅಧಿಕೃತ ಚಾಲನೆ.
- ಸ್ವಾಮಿ ವಿವೇಕಾನಂದರ ಜನ್ಮ ದಿನ ಇಂದು; ರಾಷ್ಟ್ರೀಯ ಯುವ ದಿನಾಚರಣೆ.
- ಇಂದು ಮತ್ತು ನಾಳೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ, ಉತ್ಸವಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯಗಳ ಲೋಕಸೇವಾ ಆಯೋಗಗಳು, ಪಾರದರ್ಶಕತೆ, ಜವಾಬ್ದಾರಿ ಹಾಗೂ ಬದ್ಧತೆಯಿಂದ ಕೆಲಸ ನಿರ್ವಹಿಸಿ, ವೃತ್ತಿಪರತೆಯನ್ನು ಎತ್ತಿ ಹಿಡಿಯಬೇಕೆಂದು, ಉಪ ರಾಷ್ಟ್ರಪತಿ ಜಗದೀಪ್ ಧನಕರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, ರಾಜ್ಯ ಲೋಕಸೇವಾ ಆಯೋಗಗಳ ಅಧ್ಯಕ್ಷರುಗಳ 25ನೇ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ, ಮಾತನಾಡಿದರು.

<><><>

ಉಪ ರಾಷ್ಟ್ರಪತಿಯವರು, ಬೆಂಗಳೂರಿನ ಭಾರತ ಇಲೆಕ್ಟ್ರಾನಿಕ್ಸ್ ಲಿಮಿಟೆಡ್ ನಲ್ಲಿ, ಹಲವು ಸಾಧಕರಿಗೆ, ಸಂಶೋಧನೆ ಮತ್ತು ಅಭಿವೃದ್ಧಿ ಪ್ರಶಸ್ತಿಗಳನ್ನು ಪ್ರದಾನ ಮಾಡಿ, ಗೌರವಿಸಿದರು.

<><><>

ಬಳಿಕ ಭಾರತ್ ಹೆವಿ ಇಲೆಕ್ಟ್ರಿಕಲ್ಸ್ ಲಿಮಿಟೆಡ್‌ಗೆ ಭೇಟಿ ನೀಡಿದ, ಜಗದೀಪ ಧನಕರ್ ಅವರು, ಅತ್ಯಾಧುನಿಕ ಸರ್ಫೇಸ್ ಮೌಂಟ್ ತಂತ್ರಜ್ಞಾನ ಪ್ರಕ್ರಿಯೆ ವೀಕ್ಷಿಸಿದರು. ನಂತರ, ಆವರಣದಲ್ಲಿ ತಮ್ಮ ಪತ್ನಿ ಸುಧೇಶ್ ಧನಕರ್ ಅವರೊಂದಿಗೆ, ತಮ್ಮ ತಾಯಂದಿರಾದ ಕೇಸರಿ ದೇವಿ ಹಾಗೂ ಭಗವತಿ ದೇವಿ ಅವರ ಹೆಸರಿನಲ್ಲಿ ಇಬ್ಬರೂ ಸಸಿ ನೆಟ್ಟರು.

<><><>

ರೈತರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಹಾಗೂ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ದೊರಕಿಸಲು, ರಾಜ್ಯ ಕೃಷಿ ಬೆಲೆ ಆಯೋಗ ಯೋಜಿಸುತ್ತಿದೆ ಎಂದು, ಅಧ್ಯಕ್ಷ ಅಶೋಕ ದಳವಾಯಿ ತಿಳಿಸಿದ್ದಾರೆ. ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಭೇಟಿ ನೀಡಿ, ದಲಾಲ ವರ್ತಕರು ಹಾಗೂ ಮಧ್ಯವರ್ತಿಗಳು ಹಾಗೂ ರೈತರೊಂದಿಗೆ ಅವರು ಸಮಾಲೋಚಿಸಿದರು. ಹವಾಮಾನ ಬದಲಾವಣೆ ಆಧರಿಸಿ, ಬೆಳೆ ಪದ್ಧತಿಯನ್ನು ಅಗತ್ಯಕ್ಕೆ ಅನುಗುಣವಾಗಿ ಬದಲಾಯಿಸಲು ಮತ್ತು ಮಾರ್ಪಡಿಸಲು, ಆಯೋಗ ತಜ್ಞರೊಂದಿಗೆ ಸಮಾಲೋಚನೆ ಆರಂಭಿಸಿದೆ. ಕೃಷಿ ಯಾಂತ್ರಿಕತೆ, ತಾಂತ್ರಿಕತೆ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ, ಕೃತಕ ಬುದ್ಧಿಮತ್ತೆ ಬಳಕೆ ಕುರಿತು, ಚಿಂತನೆ ನಡೆದಿದೆ ಎಂದರು.

<><><>

ಕೃಷಿಯನ್ನು ಇನ್ನ ಷ್ಟ ಲಾಭದಾಯಕವಾಗಿಸಲು, ಕೃಷಿ ವಿಶ್ವವಿದ್ಯಾಲಯಗಳು ರೈತರಿಗೆ ಶಿಕ್ಷಣ, ಸಕಾಲಿಕ ಮಾಹಿತಿ ನೀಡುವ, ಮತ್ತ ಷ್ಟ ಕೆಲಸ ಮಾಡಬೇಕು ಎಂದು, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಕೋರಿದ್ದಾರೆ. ವಿಜಯಪುರದ ಕೃಷಿ ಮಹಾವಿದ್ಯಾಲಯ ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ, ಹಿಟ್ಟಿನಹಳ್ಳಿ ಫಾರ್ಮ್‌ನಲ್ಲಿ ಆಯೋಜಿತ, ಮೂರು ದಿನಗಳ ಕೃಷಿ ಮೇಳ ಉದ್ಘಾಟಿಸಿ ಅವರು, ಮಾತನಾಡಿದರು. ಕಾಯಿಪಲ್ಲೆ, ಸೇಬು, ಕಬ್ಬು, ದ್ರಾಕ್ಷಿ, ದಾಳಿಂಬೆ ಮುಂತಾದ ಬೆಳೆಗಳನ್ನು ಈ ಭಾಗದ ರೈತರು, ಮಿಶ್ರ ಬೇಸಾಯ ಪದ್ಧತಿ ಅಡಿ ಬೆಳೆದು, ಯಶಸ್ವಿ ಕೃಷಿಕರಾಗುತ್ತಿದ್ದಾರೆ ಎಂದು ಸಚಿವರು ಹೇಳಿದರು.

<><><>

ಇಂದು ಮತ್ತು ನಾಳೆ ಕೃಷಿ ಮೇಳ ನಡೆಯಲಿದ್ದು, ರೈತರಿಗೆ ಹಲವು ಉಪಯುಕ್ತ ಮಾಹಿತಿ ಮಳಿಗೆಗಳನ್ನು ತೆರೆಯಲಾಗಿದೆ.

<><><>

ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯುವ, ಜಾಗೃತಿ ಜಾಥಾ, ಮುಂದಿನ ಭವಿ ಷ್ಯದ ದಿಕ್ಸೂಚಿ ಎಂದು, ಶ್ರೀ ಗವಿಸಿದ್ಧೇಶ್ವರ ಸ್ವಾಮೀಜಿ ಹೇಳಿದ್ದಾರೆ. ದಕ್ಷಿಣ ಭಾರತದ ಕುಂಭ ಮೇಳ ಎಂಬ ಖ್ಯಾತಿಯ, ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಹಾರಥೋತ್ಸವ ಬರುವ 15 ರಂದು ಜರುಗಲಿದ್ದು, ಜಾತ್ರಾ ಮಹೋತ್ಸವಕ್ಕೆ ನಿನ್ನೆ ಅಧಿಕೃತವಾಗಿ ಚಾಲನೆ ನೀಡಿ, ಅವರು ಮಾತನಾಡಿದರು. ಶ್ರೀ ಅಭಿನವ ಗವಿಸಿದ್ದೇಶ್ವರ ಶ್ರೀಗಳ ಕರ್ಣಧಾರತ್ವದಲ್ಲಿ ನಡೆಯಲಿರುವ, ಮಹಾ ರಥೋತ್ಸವದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶ್ರೀ ಗವಿಸಿದ್ದೇಶ್ವರ ಪದವಿಪೂರ್ವ ಮಹಾವಿದ್ಯಾಲಯದ ಉಪನ್ಯಾಸಕ ಶರಣಬಸಪ್ಪ ಬಿಳಿಎಲೆ.

<><><>

ಉಪನ್ಯಾಸಕ ಶರಣಪ್ಪ ಬಿಳಿಎಲೆ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಮಂಗಳೂರಿನಲ್ಲಿ ಭಾರತ್ ಫೌಂಡೇಶನ್ ಆಯೋಜಿಸಿರುವ, ಎರಡು ದಿನಗಳ ಏಳನೇ ಆವೃತ್ತಿಯ, 'ಲಿಟ್ ಫೆಸ್ಟ್' ಸಾಹಿತ್ಯ ಉತ್ಸವವನ್ನು, ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು..

<><><>

ಡಾ. ಎಸ್.ಎಲ್. ಭೈರಪ್ಪ ಧ್ವನಿ 50 ಸೆಕೆಂದುಗಳು

<><><>

ದೇಶಾದ್ಯಂತ ಗ್ರೀನ್ ಹೈಡ್ರೋಜನ್ ಉತ್ಪಾದನೆ ಮತ್ತು ಬಳಕೆಗೆ ವಿಶೇ ’ ಒತ್ತು ನೀಡಲಾಗಿದೆ ಎಂದು, ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವ, ಹರ್‌ದೀಪ್ ಸಿಂಗ್ ಪುರಿ ಸಂವಾದದಲ್ಲಿ ಪಾಲ್ಗೊಂಡು, ತಿಳಿಸಿದರು.

<><><>

ಇಂದು ಸಮಾರೋಪಗೊಳ್ಳಲಿರುವ, ಎರಡು ದಿನಗಳ ಸಾಹಿತ್ಯ ಉತ್ಸವದಲ್ಲಿ 60ಕ್ಕೂ ಅಧಿಕ ಭಾ ಾ ತಜ್ಞರು, ಹಿರಿಯ ಸಾಹಿತಿಗಳು, ಉದಯೋನ್ಮುಖ ಬರೆಹಗಾರರು, ಲೇಖಕರು, ಯುವ ಕವಿಗಳು, ವಾಗ್ಮಿಗಳು ಪಾಲ್ಗೊಳ್ಳಲಿದ್ದಾರೆ.

<><><>

ಭಾರತ ಕಂಡ ದಾರ್ಶನಿಕ, ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಇಂದು, ರಾಷ್ಟ್ರೀಯ ಯುವ ದಿನಾಚರಣೆಯನ್ನು, ನಾಡಿನಾದ್ಯಂತ ಅರ್ಥಪೂರ್ಣವಾಗಿ, ಶ್ರದ್ಧೆಯಿಂದ ಆಚರಿಸಲಾಗುತ್ತಿದೆ. ಹೊಸ ದಿಲ್ಲಿಯ ಭಾರತ ಮಂಟಪಂನಲ್ಲಿ ಇಂದು ಬೆಳಗ್ಗೆ ಬೆಳಗ್ಗೆ 10 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 'ವಿಕಸಿತ ಭಾರತ, ಯುವ ನಾಯಕರ ಸಂವಾದ 2025' ರಲ್ಲಿ ಪಾಲ್ಗೊಳ್ಳಲಿದ್ದಾರೆ. ದೇಶದ ವಿವಿಧ ಭಾಗಗಳ 3 ಸಾವಿರಕ್ಕೂ ಅಧಿಕ ಯುವ ನಾಯಕರೊಂದಿಗೆ ಸಂವಾದ ನಡೆಸಲಿದ್ದಾರೆ. ಯುವ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ, 10 ವಿಷಯಗಳ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ, ಪ್ರಮಾಣ ಪತ್ರಗಳನ್ನು ನೀಡಲಿದ್ದಾರೆ.

<><><>

ಬ್ರಿಟಿಷರ ವಿರುದ್ಧ, ಪ್ರಥಮ ಸ್ವಾತಂತ್ರ್ಯದ ಕಹಳೆ ಊದಿದ, ಕಿತ್ತೂರಿನ ವೀರ ರಾಣಿ ಚನ್ನಮ್ಮನವರ, ಬಲಗೈ ಬಂಟರಾಗಿದ್ದ, ಸ್ವಾತಂತ್ರ್ಯ ಹೋರಾಟಗಾರ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ, ಉತ್ಸವ ಇಂದು ಮತ್ತು ನಾಳೆ, ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲೂಕು, ಸಂಗೊಳ್ಳಿಯಲ್ಲಿ ನಡೆಯಲಿದೆ. ಇಂದು ಬೆಳಗ್ಗೆ ಕಿತ್ತೂರು ಸಂಸ್ಥಾನದ ಧ್ವಜಾ ರೋಹಣ, ಸಾರ್ವಜನಿಕ ಜಾಥಾ ಹಾಗೂ ರಾಯಣ್ಣನವರ ಪ್ರತಿಮೆಗೆ ಗೌರವಾರ್ಪಣೆ ಮತ್ತು ವಸ್ತು ಪ್ರದರ್ಶನ ಜರುಗಲಿದೆ. ರಾತ್ರಿ 8 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ಹಾಗೂ ಗಣ್ಯರು ಪಾಲ್ಗೊಳ್ಳಲಿದ್ದಾರೆ. ರಾಷ್ಟ್ರ ಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿ ನಡೆಯಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ಶ್ರೀ ಶಾರದಾ ಪೀಠದ, ಶ್ರೀ ಭಾರತಿತೀರ್ಥ ಸ್ವಾಮೀಜಿ ಸನ್ಯಾಸ ಸ್ವೀಕರಿಸಿ, 50 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ವಿಶೇಷ ಸುವರ್ಣ ಭಾರತಿ ಮಹೋತ್ಸವದಲ್ಲಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ

ಪಾಲ್ಗೊಂಡಿದ್ದರು.

<><><>

ನಾಗಾಲ್ಯಾಂಡ್‌ನ ರಸ್ತೆ ಅಪಘಾತದಲ್ಲಿ ಮೃತಪಟ್ಟ, ಬೆಳಗಾವಿ ತಾಲೂಕು ನಿಂಗ್ಯಾನಟ್ಟಿ ಗ್ರಾಮದ, 35 ವರ್ಷದ ಯುವ ಯೋಧ, ರವಿ ತಳವಾರ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಸರ್ಕಾರಿ ಗೌರವಗಳೊಂದಿಗೆ ಜರುಗಿತು.

<><><>

ಯಾದಗಿರಿ ಜಿಲ್ಲೆ, ಶಹಾಪುರ ತಾಲೂಕು ದೋರನಹಳ್ಳಿ ಕ್ಯಾಂಪ್‌ನಲ್ಲಿ, 2022ರ ಫೆಬ್ರವರಿ 25 ರಂದು ಅಡುಗೆ ಅನಿಲ ಸೋರಿ, ಬೆಂಕಿ ಆಕಸ್ಮಿಕದಲ್ಲಿ ಮೃತಪಟ್ಟ 15 ಜನರ ಕುಟುಂಬಗಳಿಗೆ ಹಾಗೂ 11 ಗಾಯಾಳುಗಳಿಗೆ, 2 ಕೋಟಿ ರೂಪಾಯಿ ಪರಿಹಾರ ನೀಡುವಂತೆ, ಗ್ರಾಹಕರ ವೇದಿಕೆ ಆದೇಶಿಸಿದೆ.

<><><>

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ, ನಾಡಿದ್ದು 16 ರಿಂದ 18ರ ವರೆಗೆ ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿ, ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

<><><>

'ಗ್ರಾಮ ಒನ್' ಸೇವಾ ಕೇಂದ್ರಗಳಲ್ಲಿ, 80 ಇಲಾಖೆಗಳ 874 ಸೇವೆಗಳನ್ನು ಪಡೆಯಲು ಅವಕಾಶವಿದೆ ಎಂದು, ಹಾವೇರಿ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲಾಡಳಿತ, ಇದೇ 23 ರಿಂದ 26ರ ವರೆಗೆ, ಮಂಗಳೂರಿನ ಕದ್ರಿ ಉದ್ಯಾನದಲ್ಲಿ, ಫಲ ಪು ್ಪ ಪ್ರದರ್ಶನ ಆಯೋಜಿಸಿದೆ.

<><><>

ನಿಕ್ಷಯ್ ಪೋಷಣ್ ಅಭಿಯಾನದಡಿ, ಕ್ಷಯ ಮುಕ್ತ ಭಾರತ, 100 ದಿನಗಳ ತೀವ್ರ ಪ್ರಚಾರ ಆಂದೋಲನ ಮುಂದುವರೆದಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರೈತರ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ; ರಾಜ್ಯ ಕೃಷಿ ಬೆಲೆ ಆಯೋಗದಿಂದ, ಯೋಜನೆ.
- ಕೃಷಿಯನ್ನು ಲಾಭದಾಯಕವಾಗಿಸಲು, ಕೃಷಿ ಮೇಳಗಳು ರೈತರಿಗೆ ಸಹಕಾರಿ.
- ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ, ಅಧಿಕೃತ ಚಾಲನೆ.
- ಸ್ವಾಮಿ ವಿವೇಕಾನಂದರ ಜನ್ಮ ದಿನ ಇಂದು; ರಾಷ್ಟ್ರೀಯ ಯುವ ದಿನಾಚರಣೆ.
- ಇಂದು ಮತ್ತು ನಾಳೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ, ಉತ್ಸವಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>